ಸರಿಯಿಲ್ಲ ಬಹುಶಃ ನೀವು ಸಾರಿಗೆ ಸಚಿವರಾದ ಮೇಲೆ ಎಷ್ಟು ಸಾರಿ ಹೋಟೆಲ್‌ಗಳನ್ನು ಇನ್ಸ್‌ಪೆಕ್ಷನ್ ಮಾಡಿದ್ದೀರೊ ಗೊತ್ತಾಗಿಲ್ಲ. ಆ ಹೋಟೆಲ್‌ಗಳಲ್ಲಿ ತಿಂದವರಿಗೆ ಕಾಯಿಲೆ ಬರುತ್ತದೆ ಎಂದು ಈಗಾಗಲೆ ಹೇಳಿದೆ ಆ ಹೋಟೆಲ್‌ಗಳಲ್ಲಿ ರುಚಿ ಶುಚಿ ಏನೂ ಇಲ್ಲ. ದಯಮಾಡಿ ಅವುಗಳನ್ನು ಶುಚಿಪಡಿಸಿ ಸರಿ ಮಾಡ ಬೇಕೆಂದು ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಆಹಾರ ಇಲಾಖೆಯ ಬಗ್ಗೆ ಹೇಳುವುದಾದರೆ ಸಂಬಂಧಪಟ್ಟ ಮಂತ್ರಿಗಳು ಈಗ ಸಭೆಯಲ್ಲಿಲ್ಲ. ನ್ಯಾಯಬೆಲೆ ಅಂಗಡಿಗಳಿಗೆ ಏನು ಅಕ್ಕಿಯನ್ನು ಕೊಡುತ್ತಾರೆ ಅದೆಲ್ಲ ಹೊಸ ಅಕ್ಕಿ ರೈತರಿಂದ ಬತ್ತವನ್ನು ಕೊಂಡುಕೊಂಡು ಪುಡ್ ಕಾರ್ಪೊರೇಷನ್‌ರವರು ಅಕ್ಕಿಯನ್ನು ಸ್ಟಾಕ್ ಮಾಡು ತ್ತಾರೆ. ಹೊಸ ಅಕ್ಕಿಯನ್ನು ನ್ಯಾಯಬೆಲೆ ಅಂಗಡಿಗಳಿಗೆ ವಿತರಣೆ ಮಾಡಿ ಹಳೆಯ ಅಕ್ಕಿಯನ್ನು ಅವರೇ ಇಟ್ಟುಕೊಳ್ಳುತ್ತಾರೆ ಈ ತರಹ ಬದಲಾಯಿಸುತ್ತಾರೆ ಸೀಸನ್‌ನಲ್ಲಿ ಸಾವಿರಾರು ಕ್ವಿಂಟಾಲ್ ಹೊಸ ಅಕ್ಕಿಯನ್ನು ಕೊಂಡುಕೊಂಡು ಅದನ್ನು ಬದಲಾವಣೆ ಮಾಡಿ ಹಳೆಯ ಅಕ್ಕಿಯನ್ನು ಅವರು ಇಟ್ಟು ಕೊಂಡು ಹೊಸ ಅಕ್ಕಿಯನ್ನು ಜನರಿಗೆ ಹಂಚುತ್ತಾರೆ. ಆದ್ದರಿಂದ ಹಳೆಯ ಅಕ್ಕಿ ಸಮರ್ಪಕವಾದ ರೀತಿ ಯಲ್ಲಿ ವಿತರಣೆಯಾಗಬೇಕು. ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸಚಿವರ ಹೇಳಿಕೆ

ಕೂಲಿ ಕೆಲಸಕ್ಕಾಗಿ ಹೋಗಿದ್ದ ಕರ್ನಾಟಕದ ಯುವಕ ಮಹಾರಾಷ್ಟ್ರದಲ್ಲಿ ಸತ್ತಿರುವ ಬಗೆ

† ಶ್ರೀ ಎಂ. ವೀರಪ್ಪಮೊಯಿಲಿ: (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಉಪಾಧ್ಯಕ್ಷಿಣಿಯವರೆ, ಬೆಳಿಗ್ಗೆ ತಾನೇ ಮಾನ್ಯ ವಿರೋಧಪಕ್ಷದ ಉಪನಾಯಕರು ಮಹಾರಾಷ್ಟ್ರದಲ್ಲಿ ನಡೆದಂತಹ ಒಂದು ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದರು. ಅವರು ಇಲ್ಲಿ ಇದ್ದಿದ್ದರೆ ಒಳ್ಳೆಯದಿತ್ತು ಆದರ ಬಗ್ಗೆ ನಾವು ಮಹಾರಾಷ್ಟ್ರದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಇಂಟೆಲಿಜೆನ್ಸ್ ಬ್ಯಾಂಬೆ, ಮತ್ತು ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿದ್ದೇವೆ. ಘಾತನಾಡಿದ ಮೇಲೆ ನಾನು ಈಗ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಕೆಳಕಂಡ ಹೇಳಿಕೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

Namdev Ambadas Bhagde, aged 16 years, son of Ambadas, hailing from Gulbarga, was residing in Tul japur in Umanabad district, Maharashtra. On 21 June 1990 at 2100 hours, he was picked by the Police staff of Tul japur Police Station for his alleged inolvement in theft cases. Later in the early hours of next day, he was left in his house in unconscious state by the Police. Subsequently he died. His father complained to the Police. There was demonstration in front of the Police Station. The demonstrators pelted stones and teargas was used to quell the rioters. On preliminary enquiry & on receipt of the Post-Mortem examination which revealed external injuries, a case of murder has been registered against Sub-Inspector Kakade and 6 other Constables. They have been arrested and are in judicial custody. They are placed under suspension. Further investigation is in progress.

I have ascertained from the Addl. Chief Secretary and Home Commissioner, Maharashtra Government and learnt that this matter came up before the Maharashtra Legislative Assembly as an Adjournment Motion which was later on converted into a Two Hour discussion wherein the Chief Minister condemned the deplorable incident and has promised that the culprits are brought to book. The matter has been referred to C.I.D. for enquiry.

Since the matter has been taken cognizance at the highest level viz., the Chief Minister, no further action appears to be necessary from our side. Incidentally, this is not a case of any harassment of Kannadigas by Maharashtra Govt., but on the contrary it is one of the police brutality/excesses and therefore I do not suggest any protest from Government of Karnataka except that a request may be made bring the culprits into book.

† ಶ್ರೀ ಪಿ. ಜಿ.ಆರ್. ಸಿಂಧ್ಯ --ಮಾನ್ಯ ಉಪಾಧ್ಯಕ್ಷೆಯವರೇ, ಮಹಾರಾಷ್ಟ್ರ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆ, ಅಲ್ಲಿಯ ವಿಧಾನಸಭೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿದ್ದಾರೆ. ಮುಖ್ಯ ಮಂತ್ರಿಗಳು ಸಹಿತ ಈ ವಿಚಾರದಲ್ಲಿ ಯಾರು ಕಲ್‌ಪ್ರಿಟ್ಸ್ ಇದ್ದಾರೆ, ಅವರನ್ನು ಬುಕ್ ಮಾಡಲಿಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ. ಶ್ರೀ ಕಾಕಡೆ, ಸಬ್ ಇನ್‌ಸ್ಪೆಕ್ಟರ್ ಮತ್ತು ಆರು ಜನರನ್ನು ಅರೆಸ್ಟ್ ಮಾಡಿದ್ದಾರೆ ಎಂದು ತಾವು ಹೇಳಿದ್ದೀರಿ, ಮುಖ್ಯವಾಗಿ ನಾನು ಈ ವಿಷಯವನ್ನು ಏಕೆ ಪ್ರಸ್ತಾಪ ಮಾಡಿದ್ದು ಎಂದರೆ, ಈಗ ನಮ್ಮ ರಾಜ್ಯದಿಂದ ಬಹಳಷ್ಟು ಜನ ಮಹಾರಾಷ್ಟ್ರದಲ್ಲಿ ಮುಂಬೈನಲ್ಲಿ ಪೂನಾ ಆಷ್ಟೇ ಅಲ್ಲ, ಬಾರ್ಡರಿಂಗ್ ಜಿಲ್ಲೆಗಳಲ್ಲಿ ಉದ್ಯೋಗಗೋಸ್ಕರ ಹೋಗಿ ನೆಲೆಸಿದ್ದಾರೆ. ಉದಾಹರಣೆಗೆ, ಪೂನಾದಲ್ಲಿ ಬಸವಕಲ್ಯಾಣ ಒಂದೇ ತಾಲ್ಲೂಕಿನಿಂದ ಹೋಗಿರತಕ್ಕ ಸುಮಾರು ಎರಡೂವರೆ ಸಾವಿರ ಜನ ಪಾನ್‌ಪೂರಿ ಮಾಡತಕ್ಕಂಥ ಕನ್ನಡಿಗರು ಇದ್ದಾರೆ. ನಾನು ಒಂದು ಸಲ ಅಲ್ಲಿಗೆ ಹೋಗಿದ್ದಾಗ ಅವರು ಬಂದು ನನ್ನನ್ನು ಭೇಟಿಯಾಗಿದ್ದರು. ಬಹಳಷ್ಟು ಈರೀತಿ ಉದ್ಯೋಗಗೋಸ್ಕರ ಹೋಗಿರುವಂಥ ಜನ ಇದ್ದಾರೆ. ಇವರು ಕನ್ನಡಿಗರು ಎನ್ನುವ ದೃಷ್ಟಿಯಿಂದ ಅಲ್ಲಿಯ ಸರ್ಕಾರದವರು ಹೆರಾಸ್‌ಮೆಂಟ್ ಮಾಡಿದ್ದಾರೆ ಎಂದು ನಾನು ಹೇಳುವುದಿಲ್ಲ, ಇದು ಲಾ ಆಂಡ್ ಆರ್ಡರ್ ಪ್ರಾಬ್ಲಮ್ ಇರಬಹುದು. ಈ ಬಗ್ಗೆ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಸುಮಾರು ಎರಡೂವರೆ ಗಂಟೆಕಾಲ ಚರ್ಚೆ ಆಗಿರುವುದರಿಂದ ನಮ್ಮ ಜನರು ಯಾರು ಇದ್ದಾರೆ ಅವರು ಉದ್ಯೋಗಕ್ಕೋಸ್ಕರ ಅಲ್ಲಿಗೆ ಹೋಗಿದ್ದಾರೆ, ಆ ಜನಕ್ಕೆ ಆ ಸರ್ಕಾರದ ಬಗ್ಗೆ ಒಂದು ನಂಬಿಕೆ, ಕಾನ್‌ಫಿಡೆನ್ಸ್ ಬರಬೇಕಾಗುತ್ತದೆ. ಆ ದೃಷ್ಟಿಯಿಂದ ಮಹಾರಾಷ್ಟ್ರ ಸರ್ಕಾರದ ಮೇಲೆ ನಾವು ಒತ್ತಾಯ ತರಬೇಕು. ಇದನ್ನು ಸಿ.ಐ.ಡಿ.ಗೆ ಹಾಕುವುದರಿಂದ ಉಪಯೋಗ ಇಲ್ಲ. ಬೇರೆಯವರು ಯಾರೋ ಕನ್ನಡಿಗರನ್ನು ಹೊಡೆದು, ಕನ್ನಡಿಗರು ಅಸಮಾಧಾನಗೊಂಡಿದ್ದರೆ ಆ ಪ್ರಶ್ನೆ ಬೇರೆ. ಆದರೆ ಇದು ಪೋಲಿಸಿನವರೇ ಮಾಡಿರತಕ್ಕಂಥ ಕೆಲಸ, ಈಗ ಸಿ. ಐ. ಡಿ., ಸಿ. ಒ. ಡಿ. ಪ್ರೊಬ್ ಯಾವರೀತಿ ನಡೆಯುತ್ತದೆ. ಎಂದು ತಪ್ಪಾಗಿ ಗೊತ್ತಿದೆ. ನಾನು ಅದರ ಬಗ್ಗೆ ವಿವರಕ್ಕೆ ಹೋಗುವುದಿಲ್ಲ. ಅಥವಾ ಮಹಾರಾಷ್ಟ್ರ ಸರ್ಕಾರದ ಪೋಲೀಸ್ ಇಲಾಖೆಯ ಕ್ರೆಡಿಬಿಲಿಟಿ ಸಹಿತ ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಅಲ್ಲಿ ಇದನ್ನು ಸಿ.ಐ.ಡಿ. ವಿಚಾರಣೆಗೆ ಹಾಕಿದರೆ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಇದಕ್ಕೆ ಯಾರು ಕಾರಣಕರ್ತರಿದ್ದಾರೆ, ಅವರ ತಪ್ಪನ್ನು ಅವರು ಎತ್ತಿ ಹಿಡಿಯುತ್ತಾರೆಯೆ ? ಮುಚ್ಚಿಡಲಿಕ್ಕೆ ಪ್ರಯತ್ನವನ್ನು ಅವರು ಮಾಡಬಹುದು ಎನ್ನತಕ್ಕಂಥ ಶಂಕೆ ನನಗಂತು ಇದೆ. ಈ ಬಗ್ಗೆ ಈ ಸದನದಲ್ಲಿ ಎರಡೂ ಕಡೆಯ, ಎಲ್ಲಾ ಸದಸ್ಯರಿಗೂ ಸಹಿತ ಕನ್ಸರ್ನ್ ಇದೆ. ನಾವು ಪ್ರೊಟೆಸ್ಟ್ ಮಾಡಬೇಕೆಂದು ಹೇಳುತ್ತಿಲ್ಲ. ಇದರ ಬಗ್ಗೆ ಮಹಾರಾಷ್ಟ್ರ ಸರ್ಕಾರದವರು ಒಂದು ಜುಡಿಶಿಯಲ್ ಎನ್‌ಕ್ವೈರಿ ಮಾಡಲಿ ಹೈಕೋರ್ಟ್ ಜಡ್ಜ್ ಸುಪ್ರೀಂ ಕೋರ್ಟ್ ಜಡ್ಜ್‌ರಿಂದ ಇದನ್ನು ಮಾಡಿಸಬೇಕೆಂದು ಹೇಳುತ್ತಿಲ್ಲ. ಒಂದು ಪೊಲೀಸ್ ಜಸ್ಟೀಯಲ್ ಎನ್‌ಕ್ವೈರಿಗೆ ನಾವು ಕೇಳಬೇಕು ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ ಇದನ್ನು ಮಾಡಿಸಬೇಕು. ಆದ್ದರಿಂದ ಇದರ ಬಗ್ಗೆ ಮಹಾರಾಷ್ಟ್ರ ಸರ್ಕಾರವನ್ನು ನಾವು ಕೇಳಬೇಕು. ಎರಡನೆಯದಾಗಿ ಯಾರು ಸತ್ತಿದ್ದಾರೆ, ಅವರಿಗೆ as a token of oneness ದೃಷ್ಟಿಯಿಂದ ಸರ್ಕಾರದಿಂದ ಏನಾದರೂ compensation ಕೊಡಬೇಕು. ಏಕೆಂದರೆ ಅವರು ತೀರಾ ಬಡವರು, ಕೂಲಿ ಮಾಡಲಿಕ್ಕೆ ಹೊರಟಿದ್ದವರು. ಇದನ್ನು ಮಾಡುಸಾಧ್ಯವೆಂದಕ್ಕೆ ಏಕೆ ಮಾಷಬಾರದು ಎಂದು ನಾನು ಒತ್ತಾಯಪೂರ್ವಕವಾಗಿ ಕೇಳುತ್ತೇನೆ.

SRI SUBHASH SRIDHAR JOSHI:—Shri Namdev Bagade was the only bread earner of the family and therefore, what Shri Sindhya has just now suggested that some compensation should be given by our Government to the family of Shri Namdev Bagade should be considered.

Secondly, many times the Maharashtra police come to Karnataka State without communicating to the Karnataka Police and conduct raids on the colonies of the nomadic tribes For that also we have to inform the Maharashtra Government that whenever there is an enquiry or something like that, they should first communicate to the police of Karnataka and then only they should come.

ಶ್ರೀ ಎಂ. ವೀರಪ್ಪ ಮೊಯಿಲಿ — ಸನ್ಮಾನ್ಯ ಅಧ್ಯಕ್ಷಣಿಯವರೇ. ಈಗಾಗಲೇ ವರದಿ ಆದಂತೆ ಮಂತ್ರಿ ನಾನು ಕೂಡ ವಿಚಾರವನ್ನು ಸದನಕ್ಕೆ ತಿಳಿಸಿರುವಂತೆ ಸಬ್‌ಇನ್‌ಸ್ಪೆಕ್ಟರ್ ಮತ್ತು ಆರು ಕಾನ್‌ಸ್ಟೆಬಲ್‌ಗಳ ಮೇಲೆ ಈಗ ಮರ್ಡರ್ ಕೇಸ್‌ನ್ನು ಯಾರು ಇನ್ವೆಸ್ಟಿಗೇಟ್ ಮಾಡಬೇಕು ? ಪೋಲೀಸ್‌ರವರೇ ಮಾಡಬೇಕಾಗುತ್ತದೆ. Murder case will have to be investigated only by the police. ತಮಗೆ ಗೊತ್ತಿದೆ, ವರದಿ ಬರುತ್ತಿರುವುದನ್ನು ನಾವು ನೋಡಬಹುದು. Even certain police officer in his capacity as Lok Ayukta, files cases against IPS Officers. I think at certain level we must have faith in the police officers. ಪರಿಸ್ಥಿತಿ ಇಲ್ಲಿ ಈ ರೀತಿಯಾದರೆ, ಮಹಾರಾಷ್ಟ್ರದಲ್ಲೂ ಕೂಡ ಇದೇ ನಡೆಯಬಹುದು. ಅಲ್ಲಿ ಸರಿಯಾದ ತನಿಖೆ ಮಾಡುವುದಿಲ್ಲ ಎಂಬ ಅನುಮಾನವನ್ನು ನಾವು ಇಷ್ಟು ದೂರದಲ್ಲಿ ಕುಳಿತುಕೊಂಡು ಏಕೆ ಮಾಡಬೇಕು ? ಇದರಲ್ಲಿ ತಾವು ನೋಡಿದ್ದೀರಿ, ಈ ಕೇಸ್‌ನಲ್ಲಿ ಯಾವುದೇ ರೀತಿಯ ಶಂಕೆ ಬಾರದ ರೀತಿಯಲ್ಲಿ, at the highest level the Hon. Chief Minister has applied his mind. ಬಹುಶಃ ಇದಕ್ಕಿಂತ ಹೆಚ್ಚು ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಆಗದಿರುವಂಥ ಒಂದು ನಂಬಿಕೆ ಹುಟ್ಟಿಸುವ ರೀತಿಯಲ್ಲಿ, ಕಾರ್ಯಕ್ರಮ ತೆಗೆದುಕೊಂಡಿರುವುದನ್ನು ನಾವು ಕಂಡಿದ್ದೇವೆ. It is an isolated case of police brutality and excesses. ಇದನ್ನು ನಾವು ಬೇರೆ ದೃಷ್ಟಿಕೋನದಿಂದ ನೋಡುವುದಿದ್ದರೆ I can understand ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎನ್ನುವಂಥ ಯಾವುದೇ ಸರ್ಕಂಸ್ಟೆನ್ಸಸ್ ಇಲ್ಲ. ಅಂತಹ ಸರ್ಕಂಸ್ಟೆನ್ಸಸ್ ಪದ್ಧತಿ ನಮ್ಮಲ್ಲಿ ಬರುವಂಥ ಇಲ್ಲದಿರತಕ್ಕ ಸಂದರ್ಭದಲ್ಲಿ ನಾವು ಜುಡಿಷಿಯಲ್ ಪ್ರೊಬ್ಬು ಮಾತ್ರೊಂದಕ್ಕೆ ಒತ್ತಾಯ ಮಾಡುವುದು ಬಹುಶಃ ಸರಿಯಾದ ಅಭಿಪ್ರಾಯ ಆಗುವುದಿಲ್ಲ ಎಂಬುದು ನಮ್ಮ ಅಭಿಪ್ರಾಯ ಆಗುವುದಿಲ್ಲ ಎಂಬುದೂ ನಮ್ಮ ಅಭಿಪ್ರಾಯ. ನಾನು ಒಪ್ಪುತ್ತೇನೆ, ಕನ್ನಡಿಗರ ಆಸ್ತಿಪಾಸ್ತಿ ಬಗ್ಗೆ, ಅವರ ಪ್ರಾಣದ ಬಗ್ಗೆ ರಕ್ಷಣೆ ಕೊಡುವುದರಲ್ಲಿ ಮಹಾರಾಷ್ಟ್ರ ಸರ್ಕಾರ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಮತ್ತು ಮಹಾರಾಷ್ಟ್ರ ಸರ್ಕಾರ ಅಲ್ಲಿನ ಕನ್ನಡಿಗರಲ್ಲಿ ಒಂದು ವಿಶ್ವಾಸ ಹುಟ್ಟಿಸುವ ರೀತಿಯಲ್ಲಿ, ಆ ವಿಶ್ವಾಸವನ್ನು ಬಲಪಡಿಸುವ ರೀತಿಯಲ್ಲಿ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ. ಏಕೆಂದರೆ ಈಗಾಗಲೆ ಲಕ್ಷಾಂತರ ಮಂದಿ ಕನ್ನಡಿಗರು ಬಾಂಬೆಯಲ್ಲಿದ್ದಾರೆ, ಮಹಾರಾಷ್ಟ್ರದಲ್ಲಿದ್ದಾರೆ, ಅನೇಕ ಕಡೆಗಳಲ್ಲಿ ಇದ್ದಾರೆ. ಅವರು ಅನೇಕ ವರ್ಷಗಳಿಂದ ಅಲ್ಲಿ ತಮ್ಮ ಜೀವನ ನಡೆಸುತ್ತಿದ್ದಾರೆ, ಅವರು ಕೈಗಾರಿಕೋದ್ಯಮಿಗಳಾಗಿ ಅಥವಾ ಬೇರೆ ಬೇರೆ ವ್ಯವಹಾರಗಳಲ್ಲಿ ಮುಂದುವರಿದಿದ್ದಾರೆ. ಆದ್ದರಿಂದ ಅಂತಹ ಅನುಮಾನಪಡತಕ್ಕ ಅವಶ್ಯಕತೆ ಅಥವಾ ಸಂದೇಹಾಸ್ಪದ ಪರಿಸ್ಥಿತಿ ಇವತ್ತು ಉದ್ಭವವಾಗಿಲ್ಲ. ಆದರೂ ಕೂಡ, the concer of this House will be conveyed to the Hon. Chief Minister of Maharashtra. We will definitely do that. ಆಮೇಲೆ ಸನ್ಮಾನ್ಯ ಸದಸ್ಯರು ಇದಕ್ಕೆ ಹೊರತಾದ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವರು ನಮ್ಮ ರಾಜ್ಯದ ಗಡಿಯೊಳಗೆ ಬಂದು ಯಾವುದಾದರೊಂದು ಕೇಸನ್ನು ರಿಜಿಸ್ಟರ್ ಮಾಡುವುದಿದ್ದರೆ ಅಥವಾ ಅವರನ್ನು ಅರೆಸ್ಟ್ ಮಾಡುವುದಿದ್ದರೆ, they will inform the local police. Without informing the local police they will not do anything. This is a matter of law which will take its own course. ಆದ್ದರಿಂದ ಈ ಬಗ್ಗೆ ಹೆಚ್ಚು ಚರ್ಚೆ ಮಾಡಿದೇ, ನಮಗೆ ಬಲವಾದ ನಂಬಿಕೆ ಮಹಾರಾಷ್ಟ್ರ ಸರ್ಕಾರದ ಮೇಲೆ, ಮಹಾರಾಷ್ಟ್ರ ಮುಖ್ಯಮಂತ್ರಿಗಳ ಮೇಲೆ ಇದೆ. ಅವರು ಕನ್ನಡಿಗರಿಗೆ ಸರಿಯಾದ ನ್ಯಾಯವನ್ನು, ಸಂರಕ್ಷಣೆಯನ್ನು

ಕೊಡುತ್ತಾ ಬಂದಿದ್ದಾರೆ, ಇನ್ನು ಮುಂದೆಯೂ ಕೊಡುತ್ತಾರೆ ಎಂಬ ಸಂಬಿಕೆಯಿಂದ ಈ ವಿಚಾರವನ್ನು ಇಲ್ಲಿಗೆ ಮುಕ್ತಾಯ ಮಾಡೋಣವೆಂದು ತಮ್ಮ ಮುಖೇನ ನಾನು ವಿನಂತಿ ಮಾಡುತ್ತೇನೆ. ಇನ್ನು ನಮ್ಮ ಸರ್ಕಾರ ಪರಿಹಾರ ಕೊಡತಕ್ಕ ವಿಚಾರ, ತಾವು ಕೊಟ್ಟಿರತಕ್ಕ ಸೂಚನೆಯನ್ನು ಸರ್ಕಾರ ವಿಚಾರ ಮಾಡುತ್ತದೆ.

ಉಪಾಧ್ಯಕ್ಷರು.—ಈಗ ಚರ್ಚೆ ಮುಂದಿದೆ. ಸದನವನ್ನು ನಾಳೆ ಬೆಳಿಗ್ಗೆ ೯ ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ ೬ ಗಂಟೆ ೯ ನಿಮಿಷಕ್ಕೆ ಮುಕ್ತಾಯವಾಗಿ, ಮತ್ತೆ ನಾಳೆ ಅಂದರೆ ೨೯–೬–೯೦ರ ಶುಕ್ರವಾರದಂದು ಬೆಳಿಗ್ಗೆ ೯ ಗಂಟೆಗೆ ನಿಶ್ಚಯಿಸಿತು).